“ಇಲ್ಲಿನ ಗಂಡಸರು ಮತ್ತು ಹೆಂಗಸರು ಒಬ್ಬರನ್ನೊಬ್ಬರು ಬೇಗ ಬೇಗ ಗಬಗಬ ನುಂಗಿಹಾಕುತ್ತಾರೆ. ಆ ಕ್ರಿಯೆಯನ್ನು ‘ಪ್ರೀತಿಸುವುದು’ ಎಂದು ಕರೆಯಲಾಗುತ್ತದೆ. ಅಥವಾ ಅವರು ಬಹಳಕಾಲ ಉಳಿಯುವ, ಉಗುರುಬೆಚ್ಚಗಿನ, ದೈನಿಕಗಳ ದಾಂಪತ್ಯದ ಗಾಡಿಜಾಡಿನಲ್ಲಿ ಚಲಿಸುತ್ತಿರುತ್ತಾರೆ. ಎಷ್ಟೋ ಸಲ, ಈ ಅತಿರೇಕಗಳ ನಡುವೆ ಬೇರೆ ಯಾವ ಮಧ್ಯ ಮಾರ್ಗವೂ ಇರುವುದಿಲ್ಲ.

ಮರಗಿಡಗಳಿಲ್ಲದ, ಪಾರಿವಾಳಗಳಿಲ್ಲದ, ಹೂವುಗಳಿಲ್ಲದ ಅಸಲು ಆತ್ಮವೇ ಇಲ್ಲದ ಈ ಊರಿಗೆ ಸೌಂದರ್ಯವಿಲ್ಲವೆಂತಲ್ಲ. ಈ ಊರು ಮಟ್ಟಸವಾದ ಬಯಲಿನಲ್ಲಿದೆ, ಊರಿನ ಸುತ್ತಲೂ ಬಿಸಿಲಿನಲ್ಲಿ ಹೊಳೆ ಹೊಳೆಯುವ ಬೆಟ್ಟಗಳಿವೆ. ಈ ಊರಿನ ಒಂದು ತುದಿಯಲ್ಲಿ ಸೊಗಸಾದ ಕೊಲ್ಲಿಯಿದೆ. ಆದರೆ ಈ ಊರು ಸಮುದ್ರಕ್ಕೆ ಬೆನ್ನು ಮಾಡಿದೆ. ಊರಿನ ಜನರಿಗೆ ಕಡಲು ಕಾಣಿಸುವುದಿಲ್ಲ, ಬೇಕಾದರೆ ಅವರೇ ಅದನ್ನು ಹುಡುಕಿಕೊಂಡು ಹೋಗಬೇಕು.

ಇಂತಹ ಈ ಊರಿನಲ್ಲಿ ಬದುಕುವುದು ಸುಲಭ, ಆದರೆ ಸಾಯುವುದು ಬಹಳ ಕಿರಿಕಿರಿಯ ಸಂಗತಿ!’’

ಒಂದು ಅಸ್ತವ್ಯಸ್ತ ನಗರದ ಕುರೂಪವನ್ನು ಇದಕ್ಕಿಂತ ಸುಂದರವಾಗಿ ಆಲ್ಬರ್ಟ್ ಕಮೂ ಅಲ್ಲದೆ ಬೇರಾರು ಕಟ್ಟಿಕೊಡಲು ಸಾಧ್ಯ? ‘ಪ್ಲೇಗ್’ ಎಂಬ ಶತಮಾನದ ಶ್ರೇಷ್ಠ ಕಾದಂಬರಿ ಬರೆದ ಕಮೂ (‘ಪ್ಲೇಗ್’ ಕನ್ನಡ ರೂಪಾಂತರ: ಎಚ್. ಎಸ್. ರಾಘವೇಂದ್ರ ರಾವ್) ಒಬ್ಬ ವೈದ್ಯನ ಅಂತರಂಗವನ್ನು ಬಗೆದ ಬಗೆಯನ್ನು ಓದಿ ಅನುಭವಿಸಬೇಕಷ್ಟೇ.

ಬೆಂಗಳೂರಿನ ನಟ್ಟಿರುಳಿನಲಿ ದೀಪವಾರಿಸಿ ಮನೆಯ ಬಾಲ್ಕನಿಯಲಿ ಕುಳಿತು ಆಗಷ್ಟೇ ಬಿದ್ದ ಮಳೆಯ ಮಣ್ಣ ಘಮಕ್ಕೆ ಯಾಕೋ ಎಂದಿನಂತೆ ಮೂಗರಳುತ್ತಿಲ್ಲ. ತುಸುವೇ ದೂರದ ಹೈವೇಯಿಂದ ಆ್ಯಂಬುಲೆನ್ಸ್‌ನ ಸೈರನ್ ಸದ್ದು ಬಿಟ್ಟರೆ ಬೆಂಗಳೂರು ಅಕ್ಷರಶಃ ಸ್ಮಶಾನ ಮೌನದಲ್ಲಿದೆ. ನನ್ನ ಕಿವಿಗಳು ಇನ್ನಷ್ಟು ಹರಿತವಾಗಿದ್ದರೆ ಬಹುಶಃ ಎದುರುಬೀದಿಯಲ್ಲಿ ಕೊರೊನಾ ಹಾಜರಿ ಹಾಕಿದ ಸಾವಿನ ಮನೆಯಿಂದ ನಿಟ್ಟುಸಿರು, ಬಿಕ್ಕಳಿಕೆ ಕೇಳಬಹುದಾಗಿತ್ತು.

ಆಸ್ಪತ್ರೆಯಲ್ಲಿ ಬೆಡ್ಡು ಸಿಗದೆ, ಬೆಡ್ಡು ಸಿಕ್ಕರೂ ಆಮ್ಲಜನಕ ಸಿಗದೆ ರಸ್ತೆಯಲ್ಲಿ, ಬೀದಿ ಬದಿಯಲ್ಲಿ ಹೆಣಗಳು ಬೀಳುತ್ತಿರುವ ಭಯಾನಕ ದೃಶ್ಯ ನೆನೆದರೆ ಜೀವ ನಡುಗುತ್ತದೆ. ಗಂಡನ ಉಳಿಸಲು ಸೆರಗೊಡ್ಡಿ ಬೇಡುವ ಆ ಯುವತಿಯ ವಯಸ್ಸು ಮೂವತ್ತು ಮೀರಿರಲಾರದು. ಕಳೆದ ಹಿಂದಿನ ದಿನವಷ್ಟೇ ಸರತಿಯ ಸಾಲಿನಲ್ಲಿ ನಿಂತು ತನ್ನ ಮಾವನ ಅಂತ್ಯಸಂಸ್ಕಾರ ಮಾಡಿ ಮುಗಿಸಿ, ಸ್ನಾನದ ಹಸಿ ಮೈ ಆರುವುದೊರಳಗೆ ಗಂಡನಿಗೆ ಕೆಂಡದಂತಹ ಜ್ವರ. ಮನೆಯಲ್ಲಿ ಪುಟ್ಟ ಮಗುವಿದೆ, ಎಲ್ಲರ ಮುಖದ ಮೇಲಿನ ಸಂಕಟದ ಗೆರೆಯನ್ನು ಗುರುತಿಸುವಷ್ಟು ದೊಡ್ಡ ಮಗು, ಏನಾಗುತ್ತಿದೆ ಎಂದು ಅಂದಾಜಿಸಲಾಗದಷ್ಟು ಸಣ್ಣ ಮಗು. ಯಾಕೆ ಎಲ್ಲರೂ ನನ್ನನ್ನು ಎತ್ತಿ ಮುದ್ದಾಡದೆ ಅಜ್ಜಿಯ ಜೊತೆ ರೂಮಿನಲ್ಲಿ ಕೂಡಿ ಹಾಕಿದ್ದಾರೆ? ಯಾಕೆ ಎಲ್ಲರೂ ಬಾಗಿಲುಗಳನ್ನು ಮುಚ್ಚಿ ತಮ್ಮ ತಮ್ಮ ಕೋಣೆಗಳಲ್ಲಿ ಅಡಗಿ ಕುಳಿತಿದ್ದಾರೆ? ಈ ಪುಟ್ಟ ಕಂದಮ್ಮನಿಗೆ ಇದೆಲ್ಲಾ ಹೊಸದು. ಆದರೆ ಸಹಿಸಲಾಗದಷ್ಟು, ವಿವರಿಸಲಾಗದಷ್ಟು ವಿಷಾದ.

ಮಾತುಗಳೆಲ್ಲ ಅರ್ಥ ಕಳೆದುಕೊಂಡ ಗಳಿಗೆ ಇದು. ಬಹುಶಃ ಬೆಂಗಳೂರಿನ ಈ ಕಥೆ, ಬೇರೆ ಮಹಾನಗರಗಳ ವ್ಯಥೆಯೂ ಇರಬಹುದೇನೊ?

ನಮ್ಮ ತಲೆಮಾರಿಗೆ ಮಹಾಯುದ್ಧಗಳ ಬಿಸಿ ತಟ್ಟಲಿಲ್ಲ. ನಾವು ದೊಡ್ಡವರಾಗುವ ಹೊತ್ತಿಗೆ ಮಹಾಮಾರಿಯಂತಹ ಸಾಂಕ್ರಾಮಿಕ ರೋಗಗಳೂ ನಾಪತ್ತೆಯಾಗಿ ಆಗ ಎದುರಿಸಿದ ಭೀಕರತೆಯನ್ನು ಸಿನಿಮಾ, ಕಾದಂಬರಿ ಅಥವ ಹಿರಿಯರ ಬಾಯಿಯಲ್ಲಿ ಕೇಳಿ ‘ಛೇ! ಅಯ್ಯೋ’ ಎಂದಿದ್ದೆವು. ಈಗ ಕಣ್ಣೆದುರಿಗೆ ಕರಾಳ ದಿನಗಳು ಕುಣಿಯುತ್ತಿವೆ. ಈ ಭೂಮಿಯ ಮೇಲೆ ಮನುಷ್ಯನೊಬ್ಬನಿಗೆ ಕಾಡಿದಷ್ಟು ಅಸ್ತಿತ್ವದ ಭಯ ಬೇರೆ ಯಾವ ಜೀವಿಗೂ ಕಾಡಿದಂತಿಲ್ಲ. ಹೀಗಾಗಿ ಹಣ ಕೂಡಿಟ್ಟ, ಆಸ್ತಿ ಸಂಪಾದಿಸಿದ, ಒಂದರ ಬದಲಾಗಿ ಎರಡು ಸೈಟು ಖರೀದಿಸಿದ. ಆದರೆ ಅವನ ಅಸ್ತಿತ್ವ, ಅಮರತ್ವ, ಎಷ್ಟೊಂದು ಪೊಳ್ಳು ಎಂದು ಸಾಬೀತುಪಡಿಸಲೇನೋ ಎಂಬಂತೆ ಈ ಮಹಾಮಾರಿ ಎದುರಾಗಿದೆ. ಈಗ ಜೀವದ ಬೆಲೆಯನ್ನು ಅಳೆಯುವುದು ಬಂಗಾರ, ಆಸ್ತಿ ಅಂತಸ್ತಿನಲ್ಲಿ ಅಲ್ಲ. ಆಸ್ಪತ್ರೆಯ ಒಂದು ಬೆಡ್ಡು, ಒಂದು ಲೀಟರ್ ಆಕ್ಸಿಜನ್ನಿನಲ್ಲಿ.

ಕೊರೊನಾ ಎರಡನೇ ಅಲೆ ನನ್ನನ್ನು ಅಕ್ಷರಶಃ ದೈಹಿಕ ಮಾನಸಿಕವಾಗಿ ತೀವ್ರವಾಗಿ ಬಳಲಿಕೆಗೀಡು ಮಾಡಿದೆ. ಯಾರಿಗೂ ಸಹಾಯ ಮಾಡದಷ್ಟು ಅಸಹಾಯಕನಾಗಿದ್ದೇನೆ. ದಿನ ನಿತ್ಯ ಆಸ್ಪತ್ರೆಯ ಬೆಡ್ಡಿಗಾಗಿ, ಇಂಜೆಕ್ಷನಿಗಾಗಿ ಹತ್ತಾರು ಕರೆಗಳು ಬರುತ್ತವೆ. ಸಂಬಂಧಪಟ್ಟವರಿಗೆ ಕರೆ ಮಾಡಿದರೆ ಬಿಜಿ ಬಿಜಿ... ಎಲ್ಲಿ ಏನಾಗುತ್ತಿದೆ ಅರ್ಥವಾಗುತ್ತಿಲ್ಲ.

ಏನೇ ಆದರೂ ಈ ಸಮಯವೂ ಆದಷ್ಟು ಬೇಗ ಕಳೆದುಹೋಗುತ್ತದೆಯೆಂದು ಮನಸು ಕೂಗಿ ಹೇಳುತ್ತದೆ. ಸೋತ ಸಮಯಕ್ಕೆ ಹೆಚ್ಚಿನ ಸಾಂತ್ವನ ಬೇಕು. ಹೆಚ್ಚಿನ ಎನರ್ಜಿ ಬೇಕು. ನಿಮ್ಮ ಅಕ್ಕಪಕ್ಕದವರು ಆಸ್ಪತ್ರೆಯ ಹಾಸಿಗೆಯಲ್ಲಿ ನಿಮ್ಮ ಒಂದು ಕರೆಗಾಗಿ ನಿರೀಕ್ಷಿಸುತ್ತಿರಬಹುದು. ಅಪ್ಪ ಅಮ್ಮ ಇಬ್ಬರೂ ಬೇರೆ ಆಸ್ಪತ್ರೆಯಲ್ಲಿ ಅಡ್ಮಿಟ್ಟಾದ ಚಿಕ್ಕಮಕ್ಕಳು ತಮ್ಮ ಮನೆಯಲ್ಲಿ ಅಡುಗೆ ಮಾಡಲು ಬಾರದೆ ಅರೆಬೆಂದ ಅನ್ನ ಸಾರು ತಿನ್ನುತ್ತಿರಬಹುದು.

ಒಂದು ಸಾಂತ್ವನದ ಮಾತು, ಒಂದು ಲೋಟ ಬಿಸಿನೀರು, ಈ ಕ್ಷಣದ ಅಮೂಲ್ಯ ವಸ್ತುಗಳು. ಯಾರಿಗೆ ಗೊತ್ತು, ನಾಳೆ ನಾವೂ ಒಂದು ದಿನ ಈ ಸರದಿಯಲ್ಲಿ ಇರಬಹುದು.

***

‘ವಿಜಯ್, ಅದು ಪೀಪಿ ಕಿಟ್ ಅಲ್ಲ ಕಣೋ, ಪಿಪಿಇ ಕಿಟ್.’

‘ಅದೇ ಸರ್. ಅದರಲ್ಲಿ ಮಾಕ್ಸ ಇಲ್ಲ ಸರ್. ಹೊಸಾ ಮಾಕ್ಸ ಕೊಡಿ ಸಾರ್.’

‘ಅದು ಮಾಕ್ಸ ಅಲ್ಲ ಕಣೋ, ಮಾಸ್ಕು.’

‘ಅದೇ ಸಾರ್. ನಾವು ಅನ್ ಎಜುಕೇಟಡ್ಡು ಸಾ...’

ಐಸು ಕರಗಿದ ಕಡ್ಡಿಯಂತಿರುವ ಆ್ಯಂಬುಲೆನ್ಸ್ ಡ್ರೈವರ್ ವಿಜಯ್ ಎಂಬ ವಿಕ್ಷಿಪ್ತ ಜೀವಿಯ ಫೋಟೊ ತೋರಿಸಲು ಮನಸಿಲ್ಲ. ಕವಿತೆಯ ಕಣ್ಣಿನಿಂದ ನೋಡಿದರೆ ಕಾರುಣ್ಯದ ಕವಿತೆಯಾಗುತ್ತಾನೆ. ಬರೆದರೆ ಕಥೆಯ ಒಂದು ಅದ್ಭುತ ಪಾತ್ರನಾಗುತ್ತಾನೆ. ಐದು ತಿಂಗಳ ಅವನ ಸಾಂಗತ್ಯದಲ್ಲಿ ನನ್ನಂತೆಯೇ ಅವನು ಒಂದೂ ರಜೆ ತೆಗೆದುಕೊಂಡಿಲ್ಲ. ಮನೆಯ ನೆನಪು ಮಾಡಿಕೊಂಡಿಲ್ಲ. ಅಸಲು ಇವನಿಗೆ ಮನೆ ಇದೆಯಾ? ಪುರುಸೊತ್ತು ಮಾಡಿಕೊಂಡು ನಾನೂ ಕೇಳಿಲ್ಲ. ಆ್ಯಂಬುಲೆನ್ಸ್ ಅನ್ನೇ ಎರಡು ಪಾರ್ಟಿಷನ್ ಮಾಡಿಕೊಂಡು ಒಂದು ಬದಿಗೆ ಇವ ಮಲಗುತ್ತಾನೆ. ರೋಗಿಗಳು ಸಾಗಿಸಿದ ಆ ಬದಿ ಸ್ಯಾನಿಟೈಜ್ ಮಾಡಿ, ಖಾಲಿ ಬಿಡುತ್ತಾನೆ. ಒಂದು ಸಲ ‘ಎಲ್ಲೋ ವಿಜಿ ನಿನ್ನ ಮನೆ’ ಎಂದಿದ್ದೆ. ಅಲ್ಲೆಲ್ಲೋ ಹರಿಶ್ಚಂದ್ರ ಘಾಟದ ಕಡೆಗಿನ ವಿಳಾಸ ಹೇಳಿದ್ದ. ‘ಭಯ ಆಗಲ್ವೇನೋ ವಿಜಿ ಆ್ಯಂಬುಲೆನ್ಸ್‌ನಲ್ಲಿ?’ ಎಂದು ಕೇಳಿದ್ದಕ್ಕೆ, ತನ್ನ ಇಡೀ ಬಾಲ್ಯವನ್ನು ಸ್ಮಶಾನದಲ್ಲಿ ಕಳೆದಿದ್ದನ್ನು ನೆನಪಿಸಿಕೊಂಡ.

‘ಬೆಂಗಳೂರಿನಂತಹ ಗಲಾಟೆಯ ಊರಿನಲ್ಲಿ ಸ್ಮಶಾನದಷ್ಟು ಶಾಂತ ಜಾಗ ಇನ್ನು ಯಾವುದು ಉಳಿದಿದೆ ಹೇಳಿ ಸಾರ್? ನಿಜ ಹೇಳಬೇಕೆಂದರೆ ಸ್ಮಶಾನಗಳೂ ಈಗ ಸಾವಿನಸಂತೆಯ ತರಹ ಗಿಜಿಗುಡುತ್ತಿವೆ’ ಎಂದು. ಬಾರೋ ವಿಜೀ ಊಟ ಮಾಡಿ ಬರೋಣವೆಂದು ಅವನ ಬಲಗೈ ಭುಜದ ಮೇಲೆ ಕೈಯಿಟ್ಟು ನಡೆಯುತ್ತಿದ್ದಾಗ, ‘ಅರೇ! ಇದೇನೋ ವಿಜಿ, **clavicle** ಮೂಳೇನೆ ತುಂಡಾಗಿ ಹೋಗಿದೆಯಲ್ಲೋ?’ ಎನ್ನುವ ಉದ್ಗಾರ ಹೊರಟಿತ್ತು. ಇಡೀ ದೇಹ ಬರೀ ಮೂಳೆ ತುಂಬಿಕೊಂಡಿದ್ದ ಅವನ ದೇಹ ಸ್ಪರ್ಶ ಮಾಡಿದ ತಕ್ಷಣ ಮುರಿದ ಮೂಳೆ ಅನುಭವಕ್ಕೆ ಬಂದಿತ್ತು. ಆ್ಯಂಬುಲೆನ್ಸ್ ಚಾಲಕನಾಗುವ ಮುಂಚೆ, ಮನೆಗಳಿಗೆ ಬಣ್ಣ ಬಳಿಯುವ ಕೆಲಸ ಮಾಡುತ್ತಿದ್ದ ಅವನು, ಒಮ್ಮೆ ನಾಲ್ಕು ಮಹಡಿಯ ಮನೆ ಪೇಂಟು ಮಾಡುವಾಗ ಬಿದ್ದು, ಅದೃಷ್ಟವಶಾತ್



